ಅಷ್ಟಕ್ಕೂ ಇಬ್ಬರದೂ ಮ್ಯಾಚ್ ಆಗಬೇಕು ಎಂಬ ನಿಬಂಧನೆಗಳ ಮಧ್ಯೆ ಮಿಣುಕು ದೀಪ ಎನ್ನುವುದು ಇನ್ನೂ ದೂರದೂರವಾದಂತೆ ಭಾಸವಾಗುತ್ತಿತ್ತು.

ದಿನಾಲೂ ರಾತ್ರಿ ಮಲಗುವಾಗೊಮ್ಮೆ, ಬೆಳಗ್ಗೆ ಎದ್ದಾಗಲೊಮ್ಮೆ ದೇವರಿಗೆ ಕೈ ಮುಗಿಯುತ್ತ, ಅಪ್ಪನ ರಕ್ತದ ಗುಂಪಿಗೆ ಮ್ಯಾಚ್ ಆಗುವಂಥ ಯಾರದಾದರೂ ಮೆದುಳು ಇವತ್ತು ನಿಷ್ಕ್ರಿಯವಾಗಬಾರದೇ ಎಂದು ಬೇಡಿಕೊಳ್ಳದಿರುತ್ತಿರಲಿಲ್ಲ ಎಂದರೆ ಅದು ಆತ್ಮವಂಚನೆಯಾದೀತು. ನಾವು, ನಮ್ಮವರು ಬದುಕಲು ಬೇರೆಯವರು ಸಾಯಲಿ ಎಂದು ಬಯಸುವ ನಾವೆಷ್ಟು ಹೃದಯಹೀನರು ಎಂದು ಒಮ್ಮೊಮ್ಮೆ ಅನ್ನಿಸದಿರುತ್ತಿರಲಿಲ್ಲ.

ಒಂದು ಕಡೆ ದಾನಿಗಳ ಹುಡುಕಾಟ ನಡೆಯುತ್ತಿದ್ದರೆ ಇನ್ನೊಂದು ಕಡೆ ರಕ್ತದ ಸಂಗ್ರಹಕ್ಕೆ ಏರ್ಪಾಟು ನಡೆಯುತ್ತಿತ್ತು. ಸಡನ್ನಾಗಿ ಯಾರದಾದರೂ ದಾನಿಗಳ ಲಿವರ್ ಮ್ಯಾಚ್ ಆಗಿಬಿಟ್ಟರೆ ಆಪರೇಷನ್ ಮಾಡಿದ ತಕ್ಷಣ ರಕ್ತ ಬೇಕಲ್ಲ. ಬ್ಲಡ್‌ಬ್ಯಾಂಕ್‌ನ ರಕ್ತವನ್ನು ನಂಬಿಕೊಂಡಿರಲು ಸಾಧ್ಯವಿಲ್ಲ. ಕೆಲವೊಮ್ಮೆ ನಮ್ಮ ಟೈಂಗೆ ಲಭ್ಯವಿರೋದಿಲ್ಲ. ಒಂದು ವೇಳೆ ಸ್ಟಾಕ್ ಇದ್ದರೂ, ಸಡನ್ನಾಗಿ ಬೇರೆಯವರಿಗೆ ಅವಶ್ಯಕತೆ ಬಿದ್ದಾಗ ನಮಗೆ ಬೇಕೂಂತ ರಿಸರ್ವ್ ಇಟ್ಟುಕೊಳ್ಳಲೂ ಅವಕಾಶವಿಲ್ಲ ಎಂದು ಸಂಬಂಧಿಕರಲ್ಲೇ ಯಾರದಾದರೂ ಮ್ಯಾಚ್ ಆಗಬಹುದೆಂಬ ಹುಡುಕಾಟವೂ ನಡೆದಿತ್ತು.

ಮನೆಯವರೆಲ್ಲರ ಬ್ಲಡ್ ಗ್ರೂಪ್ ಚೆಕ್ ಮಾಡುವಾಗ ಚಿಕ್ಕಪ್ಪ ಸಂಭ್ರಮ್ ಹಾಗೂ ಅತ್ತೆ ಅರ್ಪಿತಾಳ ರಕ್ತ ಎಲ್ಲವೂ ಅಪ್ಪನದರೊಂದಿಗೆ ಮ್ಯಾಚ್ ಆಗುತ್ತಿತ್ತು! ಅಮ್ಮನಿಗೆ ಖುಷಿ. ಅಂತೂ ನಮ್ಮ ಮನೆಯಲ್ಲೇ ಇಬ್ಬರು ದಾನಿಯಿದ್ದಾರಲ್ಲ ಅಂತ. ಅಮ್ಮ ಅವರ ಬಗ್ಗೆ ಅತೀವ ಪ್ರೀತಿ ತೋರಲಾರಂಭಿಸಿದಳು. 'ಒಂದೇ ರಕ್ತ ಹಂಚಿಕೊಂಡು ಹುಟ್ಟಿದವರು ನೀವೆಲ್ಲರೂ. ನಿಮಗೋಸ್ಕರ ನಿಮ್ಮಣ್ಣ ಅದೆಷ್ಟು ಕಷ್ಟಪಟ್ಟರಲ್ಲ, ನಿಮ್ಮ ಓದಿಗೆ, ನಿಮ್ಮ ಮದುವೆಗೆ...' ಎನ್ನುವಷ್ಟರಲ್ಲಿ ಅರ್ಪಿತಾಳ ಗಂಡನ ಆಗಮನವಾಗಿ ಸುಮ್ಮನಾದಳು. ಕಣ್ಣಂಚಿನ ನೀರು ಒರೆಸಿಕೊಂಡಳು. ಹೆಣ್ಣುಮಕ್ಕಳಿಗೆ ಎಲ್ಲದಕ್ಕೂ ಅದೆಷ್ಟು ಸುಲಭವಾಗಿ ಕಣ್ಣಲ್ಲಿ ನೀರು ಉತ್ಪಾದನೆ ಆಗಿಬಿಡುತ್ತದಲ್ಲ! ಡಾಕ್ಟರರ ಸಲಹೆ ಮೇರೆಗೆ ಅವರ ಲಿವರ್‌ನ ಆರೋಗ್ಯ ಪರೀಕ್ಷೆ ಮಾಡುವುದೆಂದಾಯಿತು.

ಅರ್ಪಿತಾ, 'ಅಣ್ಣನಿಗೋಸ್ಕರ ಅದೇನೇನು ಪರೀಕ್ಷೆ ಬೇಕೋ ಅದನ್ನೆಲ್ಲ ಮಾಡಿಸಲು ನನ್ನ ಒಪ್ಪಿಗೆ ಇದೆ, ಆದರೆ ಹಣ ಮಾತ್ರ ನೀವೇ ಖರ್ಚು ಮಾಡಬೇಕು' ಎಂದಳು. ಜೀವದ ಪ್ರಶ್ನೆ ಬಂದಾಗ ಹಣ ಯಾವ ಲೆಕ್ಕ? ಇಬ್ಬರ ಯಕೃತ್ತು ಪರೀಕ್ಷೆಯ ಸಲುವಾಗಿನ ಬ್ಲಡ್‌ಕೌಂಟ್, ಎಲ್.ಎಫ್.ಟಿ., ಅಲ್ಟ್ರಾಸೌಂಡ್, ಸಿ.ಟಿ. ಸ್ಕ್ಯಾನ್, ಎಂ.ಆರ್.ಐ., ಪಿ.ಇ.ಟಿ. ಸ್ಕ್ಯಾನ್ ಜವಾಬ್ದಾರಿಯನ್ನು ಅಮ್ಮನೇ ವಹಿಸಿಕೊಂಡಳು. ಅರ್ಪಿತಾಳದ್ದು ಆರೋಗ್ಯಕರವಾಗಿತ್ತು, ಆದರೆ ಸಂಭ್ರಮ್‌ಗೆ ಅಪ್ಪನಂತೆಯೇ ಸಣ್ಣದಾಗಿ ಕ್ಯಾನ್ಸರ್ ಸೆಲ್‌ಗಳು ಆರಂಭವಾಗಲಾರಂಭಿಸಿದ್ದವು! ಸಂಭ್ರಮ್‌ಗೆ ತಾನೂ ಅಣ್ಣನ ದಾರಿ ಹಿಡಿದಿರುವೆನೆಂಬ ಸತ್ಯದ ಅರಿವಾಗಿ ಕುಸಿದುಹೋದ. ಆದರೆ ಅಮ್ಮನ ಮಾತುಗಳ ಭರಪೂರ ಭರವಸೆ ಸಿಕ್ಕಮೇಲೆ ತಾಯಿಯ ಆಸರೆ ಸಿಕ್ಕಂತಾಗಿ ಮಾನಸಿಕವಾಗಿ ಸ್ವಲ್ಪ ಚೇತರಿಸಿಕೊಂಡ.

ಅರ್ಪಿತಾಳಿಗೆ ಇನ್ನಷ್ಟು ಪರೀಕ್ಷೆಗಳ ಅಗತ್ಯವಿದೆಯೆಂದು ಡಾಕ್ಟರರು ಹೇಳಿದ್ದಕ್ಕೆ ಆಕೆ ಒಪ್ಪಿದರೂ ಇದೀಗ ತಾನೇ ಮದುವೆಯಾಗಿರುವ ಆಕೆಯ ಗಂಡ ಹಿಂಜರಿದ. 'ಲಿವರ್ ಟ್ರಾನ್ಸ್‌ಪ್ಲಾಂಟೇಷನ್ ಅಂದರೆ ಅದು ಮೇಜರ್ ಸರ್ಜರಿ. ಬಹಳ ದೊಡ್ಡ ಲೈಫ್ ರಿಸ್ಕ್. ಇಬ್ಬರೂ ಸಾಯಬಹುದು, ಇಲ್ಲ ಇಬ್ಬರೂ ಬದುಕಬಹುದು, ಅಥವಾ ಒಬ್ಬರು ಸತ್ತು ಇನ್ನೊಬ್ಬರು ಬದುಕಬಹುದು...' ಎಂದು ಗೂಗಲ್ಲನ್ನು ಸವರಾಡಿ ಹೇಳಿದ. ಇಂಥ ರಿಸ್ಕ್‌ಗೆ ಇದೀಗ ತಾನೇ ಮದುವೆಯಾಗಿರುವ ತಾನು, ತನ್ನ ಸುಖವನ್ನು ಒರೆಗಿಟ್ಟು ಹೇಗೆ ಮುಂದೆ ಬರುವುದು? ಒಂದು ವೇಳೆ ಆಪರೇಷನ್ ಸಕ್ಸಸ್ ಆದರೂ, ಆಕೆಯನ್ನು ಜೀವನ ಪರ್ಯಂತ ಕಾಪಿಡುವುದರ ಸಂಕಷ್ಟ ಎಷ್ಟು? ಇದಕ್ಕೆ ತಾನು ಒಪ್ಪಿದರೂ ತಮ್ಮ ಮನೆಯವರು ಒಪ್ಪುತ್ತಾರೆಯೇ? ಎಂಬೆಲ್ಲ ಸಂದಿಗ್ಧಗಳು ಅವನ ಮುಂದಿದ್ದದ್ದು ಆತ ಹೇಳದಿದ್ದರೂ ನಮಗೆ ಅರ್ಥವಾಗುತ್ತಿತ್ತು. ಅಲ್ಲಿದ್ದೇನೆ, ಇಲ್ಲಿದ್ದೇನೆ, ಆಗ ಬರುತ್ತೇನೆ, ಈಗ ಬರುತ್ತೇನೆ ಎಂಬೆಲ್ಲ ಸಬೂಬುಗಳ ಹಿಂದಿನ ಮರ್ಮ ಅರಿಯಲಾರದಂಥ ಮುಗ್ಧರೇನೂ ನಾವಾಗಿರಲಿಲ್ಲ.

ಜೀವಸಾರ್ಥಕತೆಯ ಮೂಲಕ ಅಂಗಾಂಗದಾನಕ್ಕೆ ಕಾಯುತ್ತಲೇ ಇದ್ದರೂ ನಮ್ಮ ಸರದಿ ಬರಲು ಇನ್ನೂ ಬಹಳ ದೂರವಿತ್ತು. ಯಕೃತ್ತಿನ ದಾನಕ್ಕೆ ಕಾಯುತ್ತಿರುವವರಲ್ಲಿ ನಮ್ಮ ಸೀನಿಯಾರಿಟಿ ನಂಬರು 1686ನೆಯದಾಗಿತ್ತು. ಕಿಡ್ನಿಕಸಿಗೆ 5500, ಹೃದಯಕ್ಕೆ 200, ಶ್ವಾಸಕೋಶಕ್ಕೆ 100 ಜನರಂತೆ ಕಾಯುತ್ತಿದ್ದರು. ಅಂಗಾಂಗದಾನಕ್ಕೆ ವರ್ಷಕ್ಕೆ ಸರಾಸರಿ ನೂರು ಜನ ಮಾತ್ರ ಮುಂದೆ ಬರುತ್ತಿದ್ದುದು ತಿಳಿದುಬಂತು. ಅಂದರೆ ನಮ್ಮ ಸರದಿ ಬರಲು ಸುಮಾರು ಹದಿನಾರು ವರ್ಷ ಕಾಯಬೇಕೆ? ಅಲ್ಲಿಯವರೆಗೆ ಬದುಕಿರುವವರು ಯಾರೋ, ಸಾಯುವವರು ಯಾರೋ?

***

ಹಾಗೆ ನಿರಂತರ ಆಸ್ಪತ್ರೆಗೆ ಎಡತಾಕುತ್ತಿದ್ದಾಗ ನಾನು ಕುತೂಹಲಕ್ಕೆ ನಮ್ಮ ಬ್ಲಡ್‌ಗ್ರೂಪನ್ನೂ ತಿಳಿದುಕೊಳ್ಳಬಹುದಿತ್ತೆಂದು ಅಮ್ಮನಿಗೆ ಹೇಳಿದೆ. ನಾನು, ಅಮೂಲ್ಯ ಇಬ್ಬರೂ ಚೆಕ್ ಮಾಡಿಸಿಕೊಂಡೆವು. ಅಪ್ಪನದರಂತೆ ನಮ್ಮಿಬ್ಬರದೂ ಬಿ+ ಎಂದಾಗ ಕುತೂಹಲ ಗರಿಗೆದರಿತು. ಭರವಸೆಗಳೇ ಬತ್ತಿಹೋದಾಗ ಓಯಸಿಸ್ ಸಿಕ್ಕಂತಾಯಿತು. ಆಗಲೇ ಡಾಕ್ಟರರು ನಮ್ಮ ವಯಸ್ಸೆಷ್ಟು ಎಂದು ಕೇಳಿದ್ದು. ಹೆಣ್ಣುಮಕ್ಕಳ ವಯಸ್ಸು ಹೇಳುವುದಕ್ಕೆ ಒಂದು ಕ್ಷಣ ಅಮ್ಮ ಹಿಂಜರಿದಂತೆ ಕಂಡರೂ, ನಾನೇ ಮುಂದಾಗಿ ನನಗೆ ಹದಿನೇಳು, ನನ್ನ ತಂಗಿಗೆ ಹದಿನೈದು ಎಂದೆ.

ನಾನು ಫೀನಿಕ್ಸ್‌ನಂತೆ ಪುಟಿದೆದ್ದು, 'ಅಪ್ಪನಿಗಾಗಿ ನಾನು ಯಾವ ತ್ಯಾಗಕ್ಕೂ ಸಿದ್ಧ' ಎಂದು ಘೋಷಿಸಿದರೂ, ಮೆದುಳು ನಿಷ್ಕ್ರಿಯಗೊಂಡವರಿಗಾದರೆ ವಯಸ್ಸಿನ ನಿರ್ಬಂಧವಿಲ್ಲ, ಆದರೆ ಬದುಕಿದ್ದವರು ಅಂಗಾಂಗ ದಾನ ಮಾಡಲು ಕನಿಷ್ಠ ಹದಿನೆಂಟಾಗಿರಬೇಕು ಎಂದಾಗ ಅನಿವಾರ್ಯವಾಗಿ ನನ್ನ ಪಟಾಕಿ ಠುಸ್ಸೆಂದಂತಾಯಿತು. ಅಲ್ಪಸ್ವಲ್ಪ ಕಾನೂನಿನ ಅರಿವಿದ್ದ ನಾನು, ಜಮೀನಿನ ಪರಭಾರೆ ಮಾಡುವಂತೆ, ಮೈನರ್ ಪರವಾಗಿ ಅಮ್ಮನೇ ಬೇಕಾದರೆ ಸಹಿ ಮಾಡುತ್ತಾಳೆ ಎಂದರೂ ಕಾನೂನು ತೊಡಕಿನಲ್ಲಿ ಸಿಕ್ಕಿಹಾಕಿಕೊಳ್ಳಲು ಅವರು ಭಯಗೊಂಡು ತಲೆಯೊಗೆದುಬಿಟ್ಟರು. ಬೇರೆ ಯಾವುದೇ ದಾರಿ ಕಾಣದಿರುವಾಗ ಕಣ್ಣೆದುರಿಗಿರುವ ದಾರಿಯನ್ನು ನಿಷ್ಫಲಗೊಳಿಸಲು ಏನು ಮಾಡಬೇಕು ಹೇಳಿ ಎಂದು ಮರುಪ್ರಶ್ನೆ ಹಾಕಿದ್ದೆ. ನನ್ನ ಬೋಲ್ಡ್‌ನೆಸ್ ನೋಡಿ ಒಂದು ಕ್ಷಣ ಅವರಿಗೆ ಆಶ್ಚರ್ಯವಾಗಿರಬೇಕು.

'ನೀನಿನ್ನೂ ಬೆಳೆಯಬೇಕಾದ ಹುಡುಗಿ ಚಿನ್ನು, ನೀನೇನೂ ಕೊಡುವುದು ಬೇಡ. ಒಬ್ಬರನ್ನು ಉಳಿಸಲು ಹೋಗಿ ಇನ್ನೊಬ್ಬರನ್ನು ಕಳೆದುಕೊಳ್ಳಲು ನಾನು ಸಿದ್ಧಳಿಲ್ಲ. ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ, ನಾನೇ ಯಾರನ್ನಾದರೂ ಹುಡುಕೇ ಹುಡುಕುತ್ತೇನೆ; ಸಿಕ್ಕೇ ಸಿಗುತ್ತಾರೆ ಎಂಬ ಭರವಸೆಯೂ ನನಗಿದೆ...' ಎನ್ನುವಾಗ ಅಮ್ಮ ಗದ್ಗದಿತಳಾದರೂ, ಯಾರೂ ಸಿಗಲಾರರು ಎಂಬ ಸಣ್ಣ ಅಳುಕೊಂದು ಮನದೊಳಗೆ ಇದ್ದೇ ಇತ್ತು. ಆಗ ಡಾಕ್ಟರರೇ, 'ಮೈನರ್ ಡೋನರ್‌ಗೆ ಕೋರ್ಟ್ ಪರ್ಮಿಷನ್ ಬೇಕು. ಅದು ಸಿಗುವಷ್ಟರಲ್ಲಿ ಯಾರಾದರೂ ದಾನಿಗಳೇ ಸಿಕ್ಕಿರುತ್ತಾರೆ...' ಎಂದಾಗ ಮತ್ತೊಂದು ಸಣ್ಣ ಭರವಸೆ ಕಣ್ಣೆದುರು ಬಂದಂತಾಗಿ, 'ನಾನು ಕೋರ್ಟ್‌ನಿಂದಲೇ ಬೇಕಾದರೆ ಪರ್ಮಿಷನ್ ತರುತ್ತೇನೆ, ನನ್ನ ಚಿಕ್ಕಪ್ಪನೇ ಲಾಯರ್ರು...' ಎಂದು ಸಂಭ್ರಮ್‌ನನ್ನು ತೋರಿಸಿ ಹೇಳಿ, 'ಮೊದಲು ನನ್ನ ಲಿವರ್‌ನ ಕಂಡೀಷನ್ ಮ್ಯಾಚ್ ಆಗುತ್ತಾ ನೋಡಿ' ಎಂದೆ. ಅಮ್ಮ ಒಲ್ಲದ ಮನಸ್ಸಿನಿಂದ ಎಲ್ಲ ಪರೀಕ್ಷೆಗಳಿಗೆ ಹಣ ಕಟ್ಟಿದಳು. ಯಾರೋ ಒಬ್ಬ ದಾನಿ ಐವತ್ತು ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರ ಮುಂದೆ ಇದು ಚೀಪ್ ಅನ್ನಿಸಿರಬೇಕು. ಆದಾಗ್ಯೂ ಅಮ್ಮ ಅದೆಲ್ಲಿಂದ ಹಣ ಹೊಂಚುತ್ತಿದ್ದಳೋ ಗೊತ್ತಿಲ್ಲ. ಆಗ ನಾವೆಲ್ಲ ಅನುಭವಿಸುತ್ತಿದ್ದ ನೋವು, ದುಗುಡ, ಸಂಕಟ, ಆತಂಕ, ಆಘಾತಗಳಿಗೆ ಕೊನೆಯೇ ಇರಲಿಲ್ಲ.

***

ವಿಜ್ಞಾನದಲ್ಲಿ ಎರಡನೇ ಪಿಯುಸಿ ಓದುತ್ತಿದ್ದ ನಾನು, ಕಾಲೇಜಲ್ಲಿ ಕಪ್ಪೆಗಳ ಡಿಸೆಕ್ಷನ್ ನೋಡುತ್ತಿದ್ದೆನಲ್ಲ, ಹಾಗೆ ಒಬ್ಬರ ಲಿವರ್ ಅನ್ನು ಕತ್ತರಿಸಿ, ಇನ್ನೊಬ್ಬರಿಗೆ ಕಸಿಮಾಡಿ ಇಬ್ಬರನ್ನೂ ಬದುಕುಳಿಸುವ ಪ್ರಕ್ರಿಯೆ ಎಂದು ಸುಲಭವಾಗಿ ನಂಬಿದ್ದೆ. ಆದರೆ ಟೆಸ್ಟ್‌ಗಾಗಿ ರಕ್ತವನ್ನು ಹೊರತೆಗೆಯುತ್ತಿದ್ದ ಬಗೆಗೇ ನನ್ನೊಳಗೆ ಚಳುಕು ಬಂದು ಅದ್ಹೇಗೆ ಹೊಟ್ಟೆಯನ್ನು ಕೊಯ್ದು, ಅರ್ಧ ಯಕೃತ್ತನ್ನು ಕತ್ತರಿಸಿ ಅಪ್ಪನಿಗೆ ಕಸಿ ಮಾಡುತ್ತಾರೋ. ನನಗೆ ಎಷ್ಟು ನೋವಾಗುತ್ತೋ,